ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ ಸರ್ವ ಶಿಕ್ಷಣ ಅಭಿಯಾನ

# ಚಿಣ್ಣರ ಚೇತನ

2011 ಫೆಬ್ರವರಿ 1–15

ಓ ನನ್ನ ಚೇತನ ಆಗು ನೀ ಅನಿಕೇತನ

ಮಕ್ಕಳೆ,
ಆತ್ಮವಿಶ್ವಾಸ ಹಾಗೂ ಧೃಡ ನಿರ್ಧಾರಗಳು ನಮ್ಮ ಜೀವನವನ್ನೇ ಬದಲಿಸಬಲ್ಲ ಶಕ್ತಿ ಹೊಂದಿವೆ. ಇಂತಹದೇ ಒಂದು ರಾಷ್ಟ್ರೀಯ ಧೃಡ ನಿರ್ಧಾರದ ಮೂರ್ತರೂಪವೇ "ತೇಜಸ್" ಲಘು ಯುದ್ಧ ವಿಮಾನ. ಅಮೇರಿಕದ ನಿರ್ಬಂಧದ ನಡುವೆಯೂ ಇದು ಸಂಪೂರ್ಣ ಭಾರತೀಯ ವಿನ್ಯಾಸದೊಂದಿಗೆ ರೂಪುಗೊಂಡಿದೆ.

–ಸಂಪಾದಕರು

## ಏನಿದು 3ಜಿ?



ಈಚಿನ ವರ್ಷಗಳಲ್ಲಿ ನಮ್ಮ ಬದುಕನ್ನು ತೀರಾ ಗಣನೀಯವಾಗಿ ಬದಲಿಸಿರುವ ವಸ್ತುಗಳಲ್ಲಿ ಮೊಬೈಲ್ ದೂರವಾಣಿಗೆ ಪ್ರಮುಖ ಸ್ಥಾನ. ಮೊಬೈಲ್ ಫೋನ್ ಕಲ್ಪನೆ 50–60 ವರ್ಷಗಳಷ್ಟು ಹಳೆಯದು. ಸಾಮಾನ್ಯ ದೂರವಾಣಿ ಆ ವೇಳೆಗಾಗಲೇ ಸಾಕಷ್ಟು ಬಳಕೆಯಾಗುತ್ತಿತ್ತು, ರೇಡಿಯೋ ಕೂಡ ಹಳೆಯದಾಗಿತ್ತು. ಒಬ್ಬರ ಮಾತನ್ನು ಇನ್ನೊಬ್ಬರಿಗೆ ತಲುಪಿಸುವ ದೂರವಾಣಿ, ತಂತಿಗಳ ನೆರವಿಲ್ಲದೆ – ಅಂದರೆ ರೇಡಿಯೋ ರೀತಿಯಲ್ಲಿ – ಕೆಲಸ ಮಾಡಿದರೆ ಎಷ್ಟೊಂದು ಅನುಕೂಲ ಆಗುತ್ತದಲ್ಲ ಎನ್ನುವ ಯೋಚನೆ ಮೊಬೈಲ್ ದೂರವಾಣಿಯ ಸೃಷ್ಟಿಗೆ ಕಾರಣವಾಯಿತು.

ಆದರೆ ಅವತ್ತಿನ ಮೊಬೈಲ್‌ಗಳು ತೀರಾ ದೊಡ್ಡದಾಗಿದ್ದವು, ಬೆಲೆ ವಿಪರೀತ ಜಾಸ್ತಿ ಇತ್ತು, ಅದರಲ್ಲಿ ಆಡುವ ಮಾತುಗಳನ್ನು ಮೊಬೈಲ್ ಫೋನ್ ಇರುವ ಬೇರೆ ಯಾರು ಬೇಕಾದರೂ ಕೇಳಿಸಿಕೊಂಡುಬಿಡಬಹುದಿತ್ತು. ಹೀಗಾಗಿ ಮೊಬೈಲ್ ಫೋನುಗಳಿಗೆ ಭವಿಷ್ಯ ಇದೆ ಅಂತಲೇ ಯಾರೂ ನಂಬಿರಲಿಲ್ಲ. ಆದರೆ ನಿಧಾನವಾಗಿ ತಂತ್ರಜ್ಞಾನ ಬೆಳೆಯುತ್ತಾ ಹೋಯಿತು. ಮೊಬೈಲ್‌ಗಳು ಎಲ್ಲರ ಕೈಗೂ ಬಂದವು.

ಇಂದು ಪ್ರಪಂಚದಲ್ಲೇ 2ನೇ ಅತಿ ಹೆಚ್ಚು ಮೊಬೈಲ್ ಸಂಪರ್ಕ ಹೊಂದಿರುವ ದೇಶ ಭಾರತ. ಮೊಬೈಲ್ ಸೇವೆಯ ಬೆಲೆ ಅತ್ಯಂತ ಕಡಿಮೆಯಿರುವ ದೇಶಗಳ ಸಾಲಿನಲ್ಲೂ ನಮಗೆ ಪ್ರಮುಖ ಸ್ಥಾನ ಇದೆ. ಇಷ್ಟು ವರ್ಷ ನಮ್ಮ ದೇಶದಲ್ಲಿ ಎರಡನೇ ತಲೆಮಾರಿನ (2ಜಿ) ಜಿಎಸ್‌ಎಂ ಮೊಬೈಲ್ ತಂತ್ರಜ್ಞಾನ ಬಳಕೆಯಾಗುತ್ತಿತ್ತು. ಜಿಎಸ್‌ಎಂ ಎನ್ನುವುದು ಗ್ಲೋಬಲ್ ಸಿಸ್ಟಂ ಫಾರ್ ಮೊಬೈಲ್ ಕಮ್ಯೂನಿಕೇಷನ್ಸ್ ಎನ್ನುವ ಹೆಸರಿನ ಹ್ರಸ್ವರೂಪ. ಇದೀಗ ನಮ್ಮ ಮೊಬೈಲ್ ಸಂಸ್ಥೆಗಳು 3ಜಿ(3ನೇ ತಲೆಮಾರು) ಸೇವೆ ಒದಗಿಸಲು ಪ್ರಾರಂಭಿಸಿವೆ. ಅತ್ಯಂತ ವೇಗದ ಮಾಹಿತಿ ಸಂವಹನವನ್ನು ಸಾಧ್ಯವಾಗಿಸುವುದು 3ಜಿ ತಂತ್ರಜ್ಞಾನದ ವೈಶಿಷ್ಟ್ಯ. ಹೀಗಾಗಿ ಮೊಬೈಲ್ ಫೋನ್‌ನಲ್ಲೇ ಟೀವಿ ನೋಡುವುದು, ಮಿತ್ರರನ್ನು ನೋಡಿಕೊಂಡೇ ಅವರೊಡನೆ ಮಾತನಾಡುವುದು, ಹಾಡು–ವೀಡಿಯೋಗಳನ್ನು ಕ್ಷಣಾರ್ಧದಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವುದು, – ಇವೆಲ್ಲ ಸಾಧ್ಯವಾಗಲಿದೆ. ಆದರೆ 3ಜಿ ಸೇವೆ ಪಡೆಯಲು ನಮ್ಮ ಮೊಬೈಲ್‌ನಲ್ಲಿ 3ಜಿ ಸೌಲಭ್ಯ ಇರಬೇಕು.

## ಮರೆಯಾದ ಭೀಮಸೇನ ಜೋಶಿ

ಹಿಂದೂಸ್ತಾನಿ ಸಂಗೀತದ ದಿಗ್ಗಜ, ಕಿರಾಣಾ ಘರಾಣೆಯ ಪ್ರಸಿದ್ಧ ಗಾಯಕ ಪಂಡಿತ ಭೀಮಸೇನ ಜೋಶಿ ಜನವರಿ 24, 2011 ರಂದು ನಮ್ಮನ್ನು ಅಗಲಿದ್ದಾರೆ. ಗದಗ ಜಿಲ್ಲೆಯ ರೋಣದಲ್ಲಿ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಭೀಮಸೇನ ಜೋಶಿ ಸಂಗೀತದಲ್ಲಿ ಪರಿಣತಿಯನ್ನು ಸಾಧಿಸಲು ಜೀವನವನ್ನೇ ಮುಡುಪಾಗಿಟ್ಟರು. ಪಂಡಿತ್ ರಾಮಭಾವು ಕುಂದಗೋಳಕರ ಅವರ ಪಟ್ಟ ಶಿಷ್ಯರಾಗಿದ್ದ ಅವರು ದೇಶಾದ್ಯಂತ ತಮ್ಮ ಖ್ಯಾಲ್ ಗಾಯನ, ಸಂತವಾಣಿ, ದಾಸವಾಣಿಗಳಿಂದ ಪ್ರಸಿದ್ಧಿ ಪಡೆದರು. ಭಾರತ ಸರ್ಕಾರ ಅತ್ಯುನ್ನತ ನಾಗರಿಕ ಪುರಸ್ಕಾರ "ಭಾರತ ರತ್ನ"ವನ್ನು 2008ರಲ್ಲಿ ನೀಡಿ ಅವರಿಗೆ ಗೌರವ ಸಲ್ಲಿಸಿತ್ತು. ಇದಲ್ಲದೆ ಪದ್ಮಶ್ರೀ, ಪದ್ಮಭೂಷಣ, ಪದ್ಮವಿಭೂಷಣ ಮುಂತಾದ ಹಲವು ಪ್ರಶಸ್ತಿಗಳಿಗೂ ಅವರು ಪಾತ್ರರಾಗಿದ್ದರು. ರಾಷ್ಟ್ರೀಯ ಭಾವೈಕ್ಯತೆ ಬಿಂಬಿಸುವ "ಮಿಲೆ ಸುರ ಮೇರಾ ತುಮ್ಹಾರಾ" ಗೀತೆ ಅವರು ಇಡೀ ಭಾರತಕ್ಕೆ ಸೇರಿದವರು ಎಂಬುದನ್ನು ನೆನಪಿಸುತ್ತದೆ. ಪಂಡಿತ ಭೀಮಸೇನ ಜೋಶಿಯವರಿಗೆ 'ಚಿಣ್ಣರ ಚೇತನ' ಗೌರವ ಪೂರ್ವಕ ಶ್ರದ್ಧಾಂಜಲಿ ಸಲ್ಲಿಸುತ್ತಿದೆ.





**ಭಾರತೀಯ ತಂತ್ರಜ್ಞಾನದಿಂದಲೇ ರೂಪುಗೊಂಡ ಮೊದಲ ಲಘು ಯುದ್ಧ ವಿಮಾನ ಈ ತೇಜಸ್ ಎಂಬುದು ನಿಜಕ್ಕೂ ಹೆಮ್ಮೆಯ ಸಂಗತಿ.**

## ತೇಜಸ್ ವಿಮಾನ

# ಯಾರು ಇದರ ಸಮಾನ?

ಜನವರಿಯಲ್ಲಿ ಭಾರತೀಯ ವಾಯುಸೇನೆಗೆ ಸೇರ್ಪಡೆಗೊಂಡ 'ತೇಜಸ್' ಹಗುರ ಯುದ್ಧ ವಿಮಾನ, ಭಾರತದ ರಕ್ಷಣಾ ತಂತ್ರಜ್ಞಾನ ವಲಯಕ್ಕೆ ಸ್ವಾವಲಂಬನೆಯ ಹೆಮ್ಮೆಯ ಗರಿ ಮೂಡಿಸಿದೆ. ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿಯಿಂದ ವಿನ್ಯಾಸಗೊಳಿಸಲ್ಪಟ್ಟಿರುವ ತೇಜಸ್, ಅನೇಕ ಆಧುನಿಕ ತಂತ್ರಜ್ಞಾನಗಳನ್ನು ತನ್ನಲ್ಲಿ ಮೇಳವಿಸಿಕೊಂಡಿದೆ. ತೇಜಸ್ ಶಬ್ದಕ್ಕಿಂತಲೂ ವೇಗವಾಗಿ ಅಂದರೆ ಪ್ರತಿ ಗಂಟೆಗೆ 2376 ಕಿ.ಮೀ ಧಾವಿಸಬಲ್ಲದು. ಶಬ್ದಕ್ಕಿಂತಲೂ ವೇಗವಾಗಿ ಚಲಿಸುವ ವಿಮಾನಗಳನ್ನು ಸೂಪರ್ ಸಾನಿಕ್ ಎನ್ನುತ್ತಾರೆ. ತೇಜಸ್ ಆಕಾಶದಿಂದ ಆಕಾಶಕ್ಕೆ ಅಥವಾ ಆಕಾಶದಿಂದ ಭೂಮಿಗೆ ಶಸ್ತ್ರಾಸ್ತ್ರಗಳನ್ನು ನಿಖರವಾಗಿ ಪ್ರಯೋಗಿಸಬಲ್ಲದು. ಶತ್ರು ರಾಡಾರ್‌ಗಳ ಕಣ್ಣಿಗೆ ಮಣ್ಣೆರಚಬಲ್ಲ ಸ್ಟೆಲ್ಥ್ ತಂತ್ರಜ್ಞಾನದಿಂದ ತೇಜಸ್ ಶತ್ರು ವಾಯು ವಲಯದಲ್ಲಿ ನುಸುಳಬಲ್ಲದು. ಹಗಲು ರಾತ್ರಿ ಎರಡೂ ಕಾಲಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುವ ಕ್ಷಮತೆ ಈ ವಿಮಾನಕ್ಕಿದೆ. ಅತ್ಯಂತ ನಿಖರವಾಗಿ ವಿಮಾನ ಚಲಿಸುವ ಫ್ಲೈ ಬೈ ವಯರ್ ತಂತ್ರಜ್ಞಾನ ಈ ವಿಮಾನದಲ್ಲಿ ಉಪಯೋಗಿಸಲ್ಪಟ್ಟಿದೆ. ಒಮ್ಮೆ ಆಕಾಶಕ್ಕೆ ನೆಗೆದರೆ 3000 ಕಿ.ಮೀ.ವರೆಗೂ ಹಾರಾಟ ನಡೆಸಬಲ್ಲ ತೇಜಸ್, 54000 ಅಡಿ ಎತ್ತರದವರೆಗೂ ಹಾರಾಡುವ ಕ್ಷಮತೆ ಹೊಂದಿದೆ. ಏಕ ಕಾಲಕ್ಕೆ 10 ಗುರಿಗಳನ್ನು ಗಮನಿಸುವ ವಿಶೇಷ ರಾಡಾರ್ ಹೊಂದಿದೆ. ಚಾಲಕನಿಲ್ಲದೆಯೂ ಹಾರಬಲ್ಲ ಈ ವಿಮಾನವನ್ನು ದೂರದಿಂದಲೇ ನಿಯಂತ್ರಿಸಬಹುದು. ಅಗತ್ಯ ಬಂದರೆ ವಿಮಾನವೇ ಆಯುಧವಾಗಿ ಶತ್ರುಗಳನ್ನು ಅಪ್ಪಳಿಸಬಲ್ಲದು. ಇವಕ್ಕೆ ಆಕಾಶದಲ್ಲೇ ಇಂಧನ ತುಂಬಿಸಬಹುದು. ಈ ವಿಮಾನ 360 ಡಿಗ್ರಿ ತಿರುಗಬಲ್ಲದು. ಈಗಾಗಲೇ 1500 ಯಶಸ್ವಿ ಹಾರಾಟಗಳನ್ನು ಮುಗಿಸಿರುವ ತೇಜಸ್ ಮಿಗ್ ವಿಮಾನಗಳ ಬದಲಾಗಿ ಭಾರತೀಯ ವಾಯುಸೇನೆಗೆ ಸೇರ್ಪಡೆಗೊಳ್ಳಲಿದೆ. ಅಮೆರಿಕಾದ ಇಂಜಿನ್ ಹೊಂದಿದ್ದರೂ ಇದರ ಬಹಳಷ್ಟು ಭಾಗಗಳು ಭಾರತದಲ್ಲಿಯೇ ರೂಪುಗೊಂಡಿರುವುದು ಹೆಮ್ಮೆಯ ವಿಷಯ.

## ಏರೋ ಇಂಡಿಯಾ 2011

ವೈಮಾನಿಕ ಜಗತ್ತಿನ ಗಮನ ಸೆಳೆದ "ಏರೋ ಇಂಡಿಯಾ" ಬೆಂಗಳೂರಿನಲ್ಲಿ ಫೆಬ್ರವರಿ 9 ರಿಂದ 13 ರವರೆಗೆ ನಡೆಯಿತು. ಈ ಪ್ರದರ್ಶನದಲ್ಲಿ ಭಾರತದ ಹಗುರ ಯುದ್ಧ ವಿಮಾನ "ತೇಜಸ್" ಎಲ್ಲರ ಗಮನ ಸೆಳೆಯಿತು. ಎರಡು ವರ್ಷಕ್ಕೊಮ್ಮೆ ನಡೆಯುವ ಈ ಅಂತಾರಾಷ್ಟ್ರೀಯ ವಿಮಾನ ಪ್ರದರ್ಶನದಲ್ಲಿ ಜಗತ್ತಿನ ಅನೇಕ ದೇಶಗಳು ಭಾಗವಹಿಸುತ್ತವೆ. ವಿಮಾನ ತಂತ್ರಜ್ಞಾನದಲ್ಲಿ ಆದ ಹೊಸ ಆವಿಷ್ಕಾರಗಳು ಈ ಮೇಳದಲ್ಲಿ ಪ್ರದರ್ಶನಗೊಂಡವು. ಯಲಹಂಕದ ವಾಯುನೆಲೆಯಲ್ಲಿ ನಡೆದ ಈ ಪ್ರದರ್ಶನದಲ್ಲಿ ಅನೇಕ ಯುದ್ಧ ಹಾಗೂ ಸಾಗಾಣಿಕಾ ವಿಮಾನಗಳ 800 ಕಂಪನಿಗಳು ಭಾಗವಹಿಸಿದವು. ಇವು ಈ ಕ್ಷೇತ್ರದಲ್ಲಿ 1000 ಕೋಟಿ ರೂ ಹೂಡಿಕೆಗೆ ಆಸಕ್ತಿ ತೋರಿವೆ. ವಿವಿಧ ದೇಶಗಳ ಮಿಲಿಟರಿ, ನೌಕಾ ತಂತ್ರಜ್ಞರು ಭಾಗವಹಿಸಿದ ಈ ಮೇಳದಲ್ಲಿ ವೈಮಾನಿಕ ಕ್ಷೇತ್ರದ ತಂತ್ರಜ್ಞಾನ, ಬಿಡಿಭಾಗ ಸಂಬಂಧಿತ ವಹಿವಾಟು ಕೂಡ ನಡೆಯಿತು. "ಸೂರ್ಯ ಕಿರಣ" ಎಂಬ ವಿಮಾನಗಳ ತಂಡ ತನ್ನ ಆಕರ್ಷಕ ಪ್ರದರ್ಶನ ನೀಡಿತು.



## ಸ ಮಾ ಚಾ ರ

### ಪದ್ಮ ಪ್ರಶಸ್ತಿಗಳು ಪ್ರಕಟ



ಅಜೀಮ್ ಪ್ರೇಮ್‌ಜಿ



ಗಿರೀಶ್ ಕಾಸರವಳ್ಳಿ

ಈ ಸಾಲಿನ ಪದ್ಮ ಪ್ರಶಸ್ತಿಗಳ ಪಟ್ಟಿ ಪ್ರಕಟಗೊಂಡಿದೆ. ವಿವಿಧ ಕ್ಷೇತ್ರಗಳಲ್ಲಿ ಅಪ್ರತಿಮ ಸಾಧನೆ ಮಾಡಿದ 128 ಗಣ್ಯರಿಗೆ ಪ್ರಶಸ್ತಿಗಳನ್ನು ನೀಡಲಾಗಿದೆ.

ವಿಪ್ರೋ ಮುಖ್ಯಸ್ಥ ಅಜೀಮ್ ಪ್ರೇಮ್‌ಜಿ, ತೆಲುಗು ನಟ ನಾಗೇಶ್ವರ ರಾವ್ ಸೇರಿ ಒಟ್ಟು 13 ಮಹನೀಯರು ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತರ ಪಟ್ಟಿಯಲ್ಲಿದ್ದಾರೆ. ಪದ್ಮ ಭೂಷಣ ಪ್ರಶಸ್ತಿಗೆ ಭಾಜನರಾದ 31 ಜನರಲ್ಲಿ ಸಂಗೀತಗಾರ ಆರ್ ಕೆ ಶ್ರೀಕಂಠನ್, ಸಿನಿಮಾ ಕ್ಷೇತ್ರದ ಶಶಿ ಕಪೂರ್, ವಹೀದಾ ರಹಮಾನ್ ಹಾಗೂ ಖಯ್ಯಾಂ ಇದ್ದಾರೆ. 84 ಸಾಧಕರಿಗೆ ಪದ್ಮಶ್ರೀ ಪ್ರಶಸ್ತಿ ನೀಡಲಾಗಿದ್ದು, ಕನ್ನಡದ ಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ, ಹಿಂದೂಸ್ಥಾನಿ ಗಾಯಕ ಅಜಯ್ ಚಕ್ರವರ್ತಿ, ಕ್ರಿಕೆಟಿಗ ಲಕ್ಷ್ಮಣ್, ನಟಿಯರಾದ ತಬು, ಕಾಜೋಲ್ ಈ ಪಟ್ಟಿಯಲ್ಲಿದ್ದಾರೆ.

### ಹಂಪಿ ಉತ್ಸವ

ಹಂಪಿ ಉತ್ಸವ ಜನವರಿ 27, 28 ಹಾಗೂ 29ರಂದು ವೈಭವದಿಂದ ನೆರವೇರಿತು. ಪ್ರವಾಸಿಗಳಿಗೆ ವಿಜಯನಗರ ಸಾಮ್ರಾಜ್ಯದ ವೈಭವವನ್ನು ಬಿಂಬಿಸುವ ಹಾಗೂ ಜಾಗತಿಕ ಪರಂಪರಾ ಸ್ಥಾನಗಳಲ್ಲಿ ಒಂದಾದ ಹಂಪೆಗೆ ಪ್ರವಾಸಿಗಳನ್ನು ಆಕರ್ಷಿಸುವ ನಿಟ್ಟಿನಲ್ಲಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳು ಈ ಉತ್ಸವವನ್ನು ಜಂಟಿಯಾಗಿ ನಡೆಸುತ್ತಿವೆ. ಈ ಉತ್ಸವ ಸಾಹಿತ್ಯ, ಸಂಗೀತ, ವಸ್ತು ಪ್ರದರ್ಶನ, ಜಾನಪದ ಕಲೆಗಳಿಗೆ ವೇದಿಕೆಯಾಯಿತು. ಮುಖ್ಯಮಂತ್ರಿ ಯಡಿಯೂರಪ್ಪ ಉತ್ಸವವನ್ನು ಉದ್ಘಾಟಿಸಿದರು. ಸಂಸದ ಅನಂತಕುಮಾರ್ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡರು.

### ಸಾಹಿತ್ಯ ಸಮ್ಮೇಳನ

77ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಫೆಬ್ರವರಿ 4,5 ಮತ್ತು 6ರಂದು ಬೆಂಗಳೂರಿನಲ್ಲಿ ಸಂಭ್ರಮದಿಂದ ಆಚರಿಸಲ್ಪಟ್ಟಿತು. ಮೂರು ದಿನಗಳ ಈ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯ, ಕನ್ನಡ ನಾಡು ಹಾಗೂ ನುಡಿಗೆ ಸಂಬಂಧಪಟ್ಟಂತೆ ಅನೇಕ ಚರ್ಚಾ ಸತ್ರಗಳು ಯಶಸ್ವಿಯಾಗಿ ನಡೆದವು.

ನಿಘಂಟು ತಜ್ಞ ಜಿ ವೆಂಕಟಸುಬ್ಬಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಾಹಿತ್ಯ ಸಮ್ಮೇಳನ, ಕನ್ನಡದ ಉಳಿವಿಗೆ ಅನೇಕ ನಿರ್ಣಯಗಳನ್ನು ಕೈಗೊಂಡಿತು. 1ರಿಂದ 4ನೇ ತರಗತಿಯವರೆಗೆ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡುವುದು, ರಾಜ್ಯದಲ್ಲಿ ನೆಲೆಸಿರುವ ಅನ್ಯ ಭಾಷಿಕರು ಕನ್ನಡ ಕಲಿಯಬೇಕೆನ್ನುವುದು ಹಾಗೂ ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿ ಸಂವಿಧಾನದ 371 ವಿಧಿಯನ್ವಯ ಕ್ರಮ ಕೈಗೊಳ್ಳಬೇಕು ಎಂಬ ನಿರ್ಣಯಗಳು ಪ್ರಮುಖವಾದವುಗಳು. ಸುಮಾರು 5 ಲಕ್ಷ ಜನ ಸಮ್ಮೇಳನದಲ್ಲಿ ಭಾಗವಹಿಸಿದರು. ಪುಸ್ತಕಗಳ ದಾಖಲೆ ಮಾರಾಟ ಈ ಸಮ್ಮೇಳನದ ವಿಶೇಷ. ಮುಂದಿನ ಸಮ್ಮೇಳನ ಗಂಗಾವತಿಯಲ್ಲಿ ನಡೆಯಲಿದೆ.

## ತಿಳಿ ಬೆಳಕು

### ಜಿರಾಫೆಯ ಮೌನವ್ರತ

ಸಿಂಹ ಘರ್ಜಿಸುತ್ತದೆ, ಆನೆ ಘೀಳಿಡುತ್ತದೆ, ಹಸು ಅಂಬಾ ಅನ್ನುತ್ತದೆ. ಬೆಕ್ಕು ಮಿಯಾಂವ್ ಎಂದರೆ ನಾಯಿ ಭೌ ಎನ್ನುತ್ತದೆ. ಆದರೆ ಯಾವುದೇ ಧ್ವನಿ ಹೊರಡಿಸದ ಪ್ರಾಣಿಯೊಂದಿದೆ ನಿಮಗೆ ಗೊತ್ತೆ? ಅದು ಜಿರಾಫೆ. ಪ್ರತಿಯೊಂದು ಪ್ರಾಣಿ ಪಕ್ಷಿಗೂ ಅದರದ್ದೇ ಆದ ಒಂದು ಸ್ವರ ನೀಡಿದ ಭಗವಂತ ಪಾಪ ಜಿರಾಫೆಯ ಬಗ್ಗೆ ಏಕೆ ಉಡಾಫೆ ಮಾಡಿ ನಿಜಕ್ಕೂ ಅದನ್ನು ಮೂಕಪ್ರಾಣಿ ಮಾಡಿಟ್ಟ ಅಂತೀರಾ?



ಜಿರಾಫೆಯ ಗಂಟಲಲ್ಲಿ ಧ್ವನಿ ಪೆಟ್ಟಿಗೆಯೇ ಇಲ್ಲ, ಹಾಗಾಗಿ ಅವು ಶಬ್ದ ಮಾಡುವುದಿಲ್ಲ ಎಂಬುದು ಜನಜನಿತ ಕಾರಣ. ಆದರೆ ಕೆಲವರು ಹೇಳುವ ಪ್ರಕಾರ ಜಿರಾಫೆಗೂ ಧ್ವನಿಪೆಟ್ಟಿಗೆ ಇದೆ, ಆದರೆ ಅದರ ಉದ್ದ ಕತ್ತಿನೊಳಗೆ ಚಲಿಸುವ ಗಾಳಿಗೆ ಧ್ವನಿ ಹೊರಡಿಸಲು ಬೇಕಾದಷ್ಟು ಒತ್ತಡ ಇರದಿರುವುದೇ ಅವು ಸುಮ್ಮನಿರಲು ಕಾರಣವಂತೆ.

### ಆ ಬುಟ್ಟಿ ಯಾವುದೆಂದರೆ...

ಕಳೆದ ಬಾರಿಯ ಪ್ರಶ್ನೆಗೆ ಉತ್ತರ: ಐದೂ ಬುಟ್ಟಿಗಳನ್ನು ಸಾಲಾಗಿ ಇಡಿ. ಮೊದಲ ಬುಟ್ಟಿಯಿಂದ ಒಂದು ಹಣ್ಣು, 2ನೇ ಬುಟ್ಟಿಯಿಂದ ಎರಡು ಹಣ್ಣು, 3ನೇ ಬುಟ್ಟಿಯಿಂದ ಮೂರು, ನಾಲ್ಕನೇ ಬುಟ್ಟಿಯಿಂದ ನಾಲ್ಕು, ಐದನೇ ಬುಟ್ಟಿಯಿಂದ ಐದು ಹಣ್ಣು ತೆಗೆದುಕೊಂಡು ನಿಮ್ಮ ಬಳಿಯಿರುವ ಖಾಲಿ ಬುಟ್ಟಿಗೆ ಹಾಕಿ. ಒಟ್ಟು ಹದಿನೈದು ಸೇಬುಗಳಿರುವ ಈ ಬುಟ್ಟಿಯನ್ನು ತೂಕ ಮಾಡಿ.

ಎಲ್ಲಾ ಸೇಬು 100ಗ್ರಾಂ ತೂಕದವಾಗಿದ್ದಿದ್ದರೆ ಈ 15 ಸೇಬುಗಳ ತೂಕ 1500ಗ್ರಾಂ ಇರುತ್ತಿತ್ತು. ಆದರೆ ಇವುಗಳಲ್ಲಿ ಕೆಲವು 110ಗ್ರಾಂನವಾಗಿರುವುದರಿಂದ ಒಟ್ಟು ತೂಕ ತುಸು ಜಾಸ್ತಿ ಇರುತ್ತದೆ. ಉದಾಹರಣೆಗೆ ತೂಕ 1530ಗ್ರಾಂ ಇತ್ತು ಎಂದುಕೊಳ್ಳಿ. 30 ಗ್ರಾಂ ಹೆಚ್ಚು ಅಂದರೆ 3 ಹೆಚ್ಚು ತೂಕದ ಹಣ್ಣುಗಳಿವೆ ಎಂದಾಯ್ತು. 3 ಹಣ್ಣು ತೆಗೆದುಕೊಂಡಿದ್ದು 3ನೇ ಬುಟ್ಟಿಯಿಂದ ತಾನೇ? ಹಾಗಾಗಿ ಆ ಬುಟ್ಟಿಯಲ್ಲೇ ಇರುವುದು ಹೆಚ್ಚು ತೂಕದ ಸೇಬುಗಳು.

ಜಿರಾಫೆಯ ಮೌನದ ಬಗ್ಗೆ ಓದಿದಿರಿ. ಪ್ರಾಣಿಗಳ ಕುರಿತ ಅಂಥ ಸ್ವಾರಸ್ಯಕರ ಸಂಗತಿಗಳನ್ನು ಬರೆದು ಕಳಿಸಿರಿ. ಒಳ್ಳೆಯ ಬರಹಕ್ಕೆ ಬಹುಮಾನವಿದೆ. ವಿಳಾಸ ಕೆಳಗಿದೆ.

ಅದಮ್ಯ ಚೇತನ
'ಅನ್ನಪೂರ್ಣ'
ಮಹಾನಗರಪಾಲಿಕೆ ಸಮುದಾಯ ಭವನ
ಗವಿಪುರ, ಬೆಂಗಳೂರು –19

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಅದಮ್ಯ ಚೇತನ ಬೆಂಗಳೂರು

ಚಿಣ್ಣರ ಚೇತನ–ಶಾಲಾ ಮಕ್ಕಳ ಗೋಡೆ ಪತ್ರಿಕೆ. ಕರ್ನಾಟಕ ಸರ್ಕಾರ, ಸರ್ವಶಿಕ್ಷಣ ಅಭಿಯಾನ ಮತ್ತು ಅದಮ್ಯ ಚೇತನ ಸಂಸ್ಥೆ– ಇವರ ಸಹಭಾಗಿತ್ವದಲ್ಲಿ ಪ್ರಕಾಶಿಸಿದೆ.
© ಹಕ್ಕುಗಳನ್ನು ಕಾದಿರಿಸಲಾಗಿದೆ

ಸರ್ವ ಶಿಕ್ಷಣ ಅಭಿಯಾನ ಮಿಷನ್
ಬೆಂಗಳೂರು